ದಿನಾಂಕಃ 22-10-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪ್ರತಿವಾದಿ 1 ಮತ್ತು 2 ಮತ್ತು ಅವರ ವಕೀಲರನ್ನು ಕೂಗಿಸಲಾಯಿತು. ನ್ಯಾಯಾಲಯದಲ್ಲಿ ಹಾಜರು ಇರದ ಕಾರಣ ಅವರ ಪರ ಯಾವುದೇ ಪಾಟಿ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಪಾಟಿ ಸವಾಲುಃ- ಪ್ರತಿವಾದಿ 3 ಪರ ಶ್ರೀ ಎಫ ಎಸ್ ಕೆ ವಕೀಲರಿಂದ

ನನ್ನ ತಂದೆ 1997 ರಲ್ಲಿ, ನನ್ನ ತಾಯಿ 2010 ನೇ ಸಾಲಿನಲ್ಲಿ ಮೃತಪಟ್ಟಿರುವರು. ಇವರಿಗೆ ಒಟ್ಟು 5 ಜನ ಮಕ್ಕಳು. ಅವರೆಂದರೆ ನಾನು, ಪ್ರತಿವಾದಿ 1, ಪ್ರತಿವಾದಿ 2, ವಾದಿ 1, ವಾದಿ 3 ಹಾಗೂ ವಾದಿ 4 ರವರು. ಪ್ರತಿವಾದಿ 3 ರವರು 1 ನೇ ಪ್ರತಿವಾದಿ ಹೆಂಡತಿ ಅಂದರೆ ಸರಿ. ಪ್ರತಿವಾದಿ 3 ನಮ್ಮ ಮತ್ತು ಉಳಿದ ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಗೆ ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ ಅಂದರೆ ಸರಿ.

ರಿ ಸ ನಂ. 331 ರ ಜಮೀನಿನಲ್ಲಿನ 2 ಎಕರೆ, ರಿ ಸ ನಂ. 277/3 ವಿಸ್ತೀರ್ಣ 24 ಗಂಟೆ ಹಾಗೂ ರಿ ಸನಂ. 79/3 ವಿಸ್ತೀರ್ಣ 2 ಎಕರೆ ಜಮೀನುಗಳು ಮಾತ್ರ ನಿಮ್ಮ ಘರಾಣೆಗೆ ಸಂಬಂಧಪಟ್ಟಿರುವಂತಹ ಪಿತ್ರಾರ್ಜಿತ ಆಸ್ತಿಗಳು ಅಂದರೆ ಸರಿಯಲ್ಲ. ರಿ ಸ ನಂ. 79/3 ರ ಆಸ್ತಿಯು 3 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದು ಅಂದರೆ ಸರಿ. ಪ್ರತಿವಾದಿ 1 ನೀರಲಗಿ ಗ್ರಾಮಪಂಚಾಯತಿಯಲ್ಲಿ ಕಾರ್ಯದರ್ಶಿ ಅಂತಾ ಕಾರ್ಯ ನಿರ್ವಹಿಸುತ್ತಿರುವರು. ಇವರು ಸುಮಾರು 25 ವರುಷಗಳಿಂದಲೂ ಸರಕಾರಿ ನೌಕರಿ ಮಾಡುತ್ತಿರುವರು. ದಾವಾ ಆಸ್ತಿ ರಿ ಸ ನಂ. 331/1 ವಿಸ್ತೀರ್ಣ 2 ಎಕರೆ ಜಮೀನು 3 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದು ಅಂದರೆ ಸರಿಯಲ್ಲ. ದಾವಾ ಆಸ್ತಿ ರಿ ಸ ನಂ. 355/5 ಎ ವಿಸ್ತೀರ್ಣ 1 ಗುಂಟೆಯ ಜಮೀನು 3 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದು ಅಂದರೆ ಸರಿ. ರಿ ಸ ನಂ. 79/3 ಹಾಗೂ 335/5 ಎ ಆಸ್ತಿಗಳನ್ನು 3 ನೇ ಪ್ರತಿವಾದಿಯು ಖರೀದಿ ಪತ್ರದ ಮೂಲಕ ಖರೀದಿ ಮಾಡಿರುವಳು ಅಂದರೆ ಸರಿ. ಅವು ಒಟ್ಟು ಕುಟುಂಬದ ಆಸ್ತಿಗಳು ಆಗಿರುವವು ಎಂದು ಸಾಕ್ಷಿ ಉತ್ತರಿಸುವರು. ನಮ್ಮ ಮನೆತನದ ಹಿರೇತನ 1 ನೇ ಪ್ರತಿವಾದಿ

ಮಾಡುತ್ತಿರುವುದರಿಂದ ಈ ಎರಡೂ ಜಮೀನುಗಳನ್ನು 3 ನೇ ಪ್ರತಿವಾದಿಯ ಹೆಸರಿನಲ್ಲಿ ಆ ಕಾರಣದಿಂದ ಖರೀದಿ ಹಿಡಿದಿರುವೆವು. ಈ ಎರಡೂ ಜಮೀನುಗಳನ್ನು 3 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಹಿಡಿದಿರುವ ಬಗ್ಗೆ ನಾನು 1 ನೇ ಪ್ರತಿವಾದಿಗೆ ಕೇಳಿರುವುದಿಲ್ಲ. ಆದರೆ ನನ್ನ ತಮ್ಮ 3 ನೇ ವಾದಿ 1 ನೇ ಪ್ರತಿವಾದಿಗೆ ಕೇಳಿರುವನು. 3 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಹಿಡಿದಿರುವ ಖರೀದಿ ಪತ್ರಗಳ ಬಗ್ಗೆ ಇವತ್ತಿನವರೆಗೂ ನಾವು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ ಅಂದರೆ ಸರಿ. ಸುಮಾರು 25 ವರುಷಗಳಿಂದಲೂ ಪ್ರತಿವಾದಿ 1 ಮತ್ತು 3 ರವರು ತಮ್ಮ ಕುಟುಂಬ ಸಮೇತ ನೌಕರಿ ಮಾಡುತ್ತಾ ನಮ್ಮ ಮನೆಯಿಂದ ಪ್ರತ್ಯೇಕವಾಗಿ ವಾಸಿಸುತ್ತಾ ಇರುವರು ಅಂದರೆ ಸರಿಯಲ್ಲ.

1 ನೇ ಪ್ರತಿವಾದಿ ತಡಸ ಗ್ರಾಮಪಂಚಾಯತಿಯಲ್ಲಿ ನೌಕರಿ ಮಾಡಿರುವರು ಅಂದರೆ ಸರಿ. 3 ನೇ ಪ್ರತಿವಾದಿಯು 1 ನೇ ಪ್ರತಿವಾದಿಯೊಂದಿಗೆ ವಾಸವಾಗಿದ್ದಾಗ ತಮ್ಮ ಮನೆಯಲ್ಲಿ ಜರಾಕ್ಸ ಮಷಿನು ಹಾಗೂ ಟೈಪರೈಟಿಂಗ್ ಮಷಿನನ್ನು ಇಟ್ಟುಕೊಂಡಿದ್ದರು ಅಂದರೆ ಸರಿಯಲ್ಲ. ಇವುಗಳಿಂದ ಬಂದ ಆದಾಯವನ್ನು 3 ನೇ ಪ್ರತಿವಾದಿಯು ತನ್ನ ಹೆಸರಿನಲ್ಲಿ ಖರೀದಿ ಮಾಡಿರುವ ಜಮೀನುಗಳಿಗೆ ಸ್ವಲ್ಪ ಹಣವನ್ನು ನೀಡಿರುವಳು ಅಂದರೆ ಸರಿಯಲ್ಲ. ಇನ್ನೂಳಿದ ಈ ಜಮೀನುಗಳ ಖರೀದಿ ಹಣವನ್ನು 3 ನೇ ಪ್ರತಿವಾದಿಯ ಸಹೋದರರು ದೇವಗಿರಿ ಗ್ರಾಮದಲ್ಲಿನ ರಿ ಸ ನಂ. 241 ರ ಜಮೀನನ್ನು ಮಾರಾಟ ಮಾಡಿದ್ದು, ಅದರಿಂದ 3 ನೇ ಪ್ರತಿವಾದಿಗೆ ಬಂದಿರತಕ್ಕಂತಹ ಹಿಸ್ಸೆಯ ಹಣವನ್ನು ಹಾಕಿ ಈ ಎರಡೂ ಜಮೀನುಗಳನ್ನು ಖರೀದಿ ಮಾಡಿರುವಳು ಅಂದರೆ ಸರಿಯಲ್ಲ. ಪ್ರತಿವಾದಿ 3 ವಿನ ಸಹೋದರರು ಜಮೀನು ಮಾರಾಟ ಮಾಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಮುಂದಿನ ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ ಪ್ರಕರಣವನ್ನು ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.

ಅಸಲು ದಾವಾ ನಂ. 101/2018
ಪಿಡಬ್ಲು 1